ಕನ್ನಡ ದಿನಪತ್ರಿಕೆ
1 ಆಗಸ್ಟ್ 2025 | ಶುಕ್ರವಾರ
1 AUGUST 2025

ವಿಜಯವಾಣಿ

ಕನ್ನಡಿಗರ ಧ್ವನಿ

VIJAYAVANI • BENGALURU • ಬೆಂಗಳೂರು • studentmitra12@gmail.com • ಸಂಪುಟ: 14 • ಸಂಚಿಕೆ: 247 • ಪುಟ: 8 ₹

ವಿದ್ಯಾರ್ಥಿ ಉದ್ಯೋಗ ಮಿತ್ರ

ಮುಂಜಾನೆ ಮಾತು

ಎಲ್ಲರೂ ಅದನ್ನೇ ಮಾಡುತ್ತಿದ್ದಾರೆ ಅನ್ನೋ ಒಂದೇ ಕಾರಣಕ್ಕೆ ತಪ್ಪೇನೂ ಸರಿಯಾಗಲಾರದು. ಒಬ್ಬರೇ ಆದರೂ ಸರಿ, ಸರಿಯಾದದ್ದನ್ನೇ ಮಾಡೋಣ!

ಯೂನಿವರ್ಸಲ್ ಕೋಚಿಂಗ್ ಸೆಂಟರ್ 7
ದಿ ಕ್ಲಾಸಿಕ್ ಕೆಎಎಸ್ ಮತ್ತು ಐಎಎಸ್ ಸ್ಟಡಿ ಸರ್ಕಲ್
ಚಾಣಕ್ಯ ಕರಿಯರ್ ಅಕಾಡೆಮಿ 6
ಪಾಟೀಲ್ಸ್ ಗುರುಕುಲ್ ಕರಿಯರ್ ಅಕಾಡೆಮಿ 7
ಸ್ಪರ್ಧಾತ್ಮಕ ಪರೀಕ್ಷೆಗಳ ಮಾದರಿ ಪ್ರಶ್ನೋತ್ತರ
INSIGHTSIAS
ಇನ್‌ಸೈಟ್ಸ್ ಐಎಎಸ್ ಇನ್‌ಸ್ಟಿಟ್ಯೂಟ್‌ನಿಂದ ಯುಪಿಎಸ್ಸಿ ತರಬೇತಿ 7
MIND GAME 5 ಪದಮಿತ್ರ
ಪರಂಪರೆ QUIZ 8
ಪರಿಶ್ರಮದಿಂದ ನೀಟ್ ತರಬೇತಿ 6
ಬೇಸ್‌ನಿಂದ ಜೆಇಇ ಸಿಇಟಿ ಪ್ರಶ್ನೋತ್ತರ 6
ಅತ್ಯಂದ್ ಇರ್ಕೆಯೊಂದಿಂದ ರೈಲ್ವೆ ನೇಮಕಾತಿ ಸರಣಿ 6
*Source: Average Combined Circulation for All Editions, ABC Jan-June 2024

ಸಮಗ್ರ ಕೃಷಿ ವಿಶ್ವವಿದ್ಯಾಲಯಗಳ ರಚಿಸಿ

ಸರ್ಕಾರಕ್ಕೆ ವಿಜಯಭಾಸ್ಕರ್ ಸಮಿತಿ ಶಿಫಾರಸು | ವರದಿ ಸಲ್ಲಿಸಿದ ತಜ್ಞರು

ರಾಜ್ಯದ ಕೃಷಿ, ತೋಟಗಾರಿಕಾ, ಅರಣ್ಯ, ರೇಷ್ಮೆ ಕಾಲೇಜು ಹಾಗೂ ಸಂಶೋಧನಾ ಕೇಂದ್ರಗಳು, ವಿಸ್ತರಣಾ ಘಟಕಗಳನ್ನು ಒಳಗೊಂಡ ಸಮಗ್ರ ಕೃಷಿ ವಿಶ್ವವಿದ್ಯಾಲಯಗಳನ್ನು ರಚಿಸಬೇಕಿದೆ ಎಂದು ತಜ್ಞರ ಸಮಿತಿ ವರದಿ ಸಲ್ಲಿಸಿದೆ.

ಕಳೆದ ಮಾರ್ಚ್‌ನಲ್ಲಿ ರಚಿಸಲಾಗಿದ್ದ ನಿವೃತ್ತ ಐಎಎಸ್ ಅಧಿಕಾರಿ ಟಿ.ಎಂ. ವಿಜಯಭಾಸ್ಕರ್ ನೇತೃತ್ವದ ತಜ್ಞರ ಸಮಿತಿ ಈ ಶಿಫಾರಸು ಮಾಡಿದ್ದು, ಒಂದೇ ಸೂಧಿನಡಿ ಎಲ್ಲ ಅಧ್ಯಯನ ವಿಭಾಗಗಳನ್ನು ತರಲು ಸಲಹೆ ನೀಡಿದೆ. ಈಗಿರುವ ಕೃಷಿ, ತೋಟಗಾರಿಕಾ ಹಾಗೂ ಇತರ ವಿಷಯಗಳ ವಿಶ್ವವಿದ್ಯಾಲಯಗಳನ್ನು ಎರಡು ಹಂತಗಳಲ್ಲಿ ಒಂದಾಗಿಸಲು ಯೋಜನೆ ಸಿದ್ಧಪಡಿಸಿದೆ. ಈ ಎರಡು ಹಂತಗಳಲ್ಲಿ ಸಮಗ್ರತೆ ಅನುಷ್ಠಾನ, ಕಾಲೇಜುಗಳ ಮರುಸಂಘಟನೆ ಬಗ್ಗೆಯೂ ಪ್ರಸ್ತಾಪ ಮಾಡಲಾಗಿದೆ. ಜತೆಗೆ, ಸಮಗ್ರ ಕೃಷಿ ಹಾಗೂ ಪಶು ಸಂಗೋಪನಾ ವಿವಿಗಳ ಭೌಗೋಳಿಕ ವ್ಯಾಪ್ತಿ ನಿಗದಿ ಮಾಡಿದೆ. ಇದಲ್ಲದೆ, ವ್ಯಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿಯಿಂದ ಸಮಗ್ರತೆಯ ಉದ್ದೇಶ ಫಲಪ್ರದವಾಗಲಿದೆ ಎಂದು ಅಭಿಪ್ರಾಯಪಟ್ಟಿದೆ.

> ಪಶು ವೈದ್ಯಕೀಯ, ಪ್ರಾಣಿ ವಿಜ್ಞಾನ ಕಾಲೇಜು ಪ್ರತ್ಯೇಕಕ್ಕೆ ಸಲಹೆ

ದೇಶದಲ್ಲಿ ಪ್ರಸ್ತುತ 75ಕ್ಕೂ ಅಧಿಕ ರಾಜ್ಯ/ಕೇಂದ್ರ ಕೃಷಿ ವಿವಿ, ಸಂಶೋಧನಾಲಯಗಳು ಕಾರ್ಯ ನಿರ್ವಹಿಸುತ್ತಿವೆ. ಅಂತೆಯೇ ರಾಜ್ಯದಲ್ಲಿ ಮೂರು ಕೃಷಿ ವಿಶ್ವವಿದ್ಯಾಲಯಗಳು ಕೆಲ ಜಿಲ್ಲೆಗಳ ವ್ಯಾಪ್ತಿ ಹೊಂದಿದ್ದರೆ, ಒಂದು ಕೃಷಿ ಮತ್ತು ತೋಟಗಾರಿಕಾ ವಿವಿ, ಒಂದು ತೋಟಗಾರಿಕಾ ವಿವಿ 24 ಜಿಲ್ಲೆಗಳ ಕಾರ್ಯವ್ಯಾಪ್ತಿ ಹೊಂದಿದ್ದರೆ, ಒಂದು ಪಶು ಸಂಗೋಪನೆ ಮತ್ತು ಮೀನುಗಾರಿಕಾ ವಿಜ್ಞಾನ ವಿವಿ ಮಾತ್ರ ಇಡೀ ರಾಜ್ಯದ ವ್ಯಾಪ್ತಿ ಹೊಂದಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ. ಜತೆಗೆ ಬೇರೆ ರಾಜ್ಯಗಳಲ್ಲಿ ಕೃಷಿ ಮತ್ತು ಇತರ ವಿವಿಗಳ ಕಾರ್ಯ ಮತ್ತು ಭೌಗೋಳಿಕ ವ್ಯಾಪ್ತಿಯನ್ನು ಸಮಿತಿ ಅಧ್ಯಯನ ಮಾಡಿದೆ.



ಎರಡು ಹಂತಗಳಲ್ಲಿ ಮರು ಸಂಘಟನೆ

ಆರಂಭದಲ್ಲಿ ಬೆಂಗಳೂರು ಕೃಷಿ ವಿವಿಯೊಂದೇ ರಾಜ್ಯವ್ಯಾಪಿ ಕಾರ್ಯಚರಿಸುತ್ತಿತ್ತು. ನಂತರ ಉತ್ತರ ಕರ್ನಾಟಕ ಭಾಗಕ್ಕಾಗಿ ಧಾರವಾಡ ಕೃಷಿ ವಿವಿ ಆರಂಭಿಸಲಾಯಿತು. ನಂತರ ಹಂತಹಂತವಾಗಿ ಉಳಿದ ಕೃಷಿ ಹಾಗೂ ತೋಟಗಾರಿಕಾ ವಿವಿಗಳನ್ನು ಆರಂಭಿಸಲಾಯಿತು. ಒಟ್ಟಾರೆಯಾಗಿ ರಾಜ್ಯದ ಕೃಷಿ ಸಂಬಂಧಿತ ವಿವಿಗಳು ಸಮಗ್ರವಾಗಿಲ್ಲ ಅಥವಾ ಪ್ರತ್ಯೇಕವಾಗಿಯೂ ಇಲ್ಲ. ಹೀಗಾಗಿ ಮೊದಲ ಹಂತದಲ್ಲಿ ಕೃಷಿ, ತೋಟಗಾರಿಕೆ, ಅರಣ್ಯ ಮತ್ತು ರೇಷ್ಮೆ ಕಾಲೇಜುಗಳು, ಸಂಶೋಧನಾ ಕೇಂದ್ರ ಹಾಗೂ ವಿಸ್ತರಣಾ ಘಟಕಗಳನ್ನು ಏಕೀಕೃತಗೊಳಿಸತಕ್ಕದ್ದು. ಎರಡನೇ ಹಂತದಲ್ಲಿ ಪಶು ವೈದ್ಯಕೀಯ, ಡೇರಿ ವಿಜ್ಞಾನ ಕಾಲೇಜು, ಮೀನುಗಾರಿಕಾ ಕಾಲೇಜು ಹಾಗೂ ಇವುಗಳಿಗೆ ಸಂಬಂಧಿಸಿದ ಸಂಶೋಧನಾ ಕೇಂದ್ರಗಳು, ವಿಸ್ತರಣಾ ಘಟಕಗಳನ್ನು ಸಮಗ್ರ ವಿವಿಯಾಗಿ ರೂಪಿಸಬೇಕೆಂದು ವರದಿ ಹೇಳಿದೆ. ಅಂತೆಯೇ ಸಸ್ಯ ವಿಜ್ಞಾನದ ಕಾಖೆ ಹಾಗೂ ಪ್ರಾಣಿ ವಿಜ್ಞಾನದ ಕಾಲೇಜುಗಳನ್ನು ಪ್ರತ್ಯೇಕವಾಗಿಯೇ ಇರಿಸಬೇಕೆಂದು ಶಿಫಾರಸು ಮಾಡಲಾಗಿದೆ.

ಹೊಸ ವಿವಿಗಳು ಬೇಡ

ರಾಜ್ಯದಲ್ಲಿ ಹೊಸ ವಿಶ್ವವಿದ್ಯಾಲಯಗಳ ಸ್ಥಾಪನೆ ಬೇಡ ಎಂದು ವಿಜಯಭಾಸ್ಕರ್ ಸಮಿತಿ ಹೇಳಿದೆ. ನೆರೆ ರಾಜ್ಯಗಳಿಗೆ ಹೋಲಿಸಿದಲ್ಲಿ ರಾಜ್ಯದಲ್ಲಿಯೇ ಹೆಚ್ಚು ಕೃಷಿ ಸಂಬಂಧಿತ ವಿವಿಗಳಿವೆ. ಬೇರೆ ರಾಜ್ಯಗಳ ಕೃಷಿ ವಿಶ್ವವಿದ್ಯಾಲಯಗಳು ಇಡೀ ರಾಜ್ಯವನ್ನೇ ಕೇಂದ್ರವಾಗಿಸಿಕೊಂಡಿವೆ. ಉಳಿದ ರಾಜ್ಯಗಳಿಗೆ ಹೋಲಿಸಿದಲ್ಲಿ ಕರ್ನಾಟಕವು ಕಡಿಮೆ ಜನಸಂಖ್ಯೆ ಹಾಗೂ ಭೌಗೋಳಿಕ ವ್ಯಾಪ್ತಿ ಹೊಂದಿದೆ. ಹೀಗಾಗಿ ಹೊಸ ವಿವಿಗಳ ಸ್ಥಾಪನೆಯಿಂದ ಮೂಲ ಸೌಕರ್ಯ ಹಾಗೂ ಆಡಳಿತಾತ್ಮಕ ವೆಚ್ಚ ಹೆಚ್ಚಾಗಲಿದೆ. ಮಾತ್ರವಲ್ಲದೆ, ಇತರ ವಿವಿಗಳನ್ನು ದುರ್ಬಲಗೊಳಿಸುತ್ತದೆ. ಉಳಿದ ವಿವಿಗಳ ಶೈಕ್ಷಣಿಕ, ಸಂಶೋಧನೆ ಹಾಗೂ ವಿಸ್ತರಣಾ ಚಟುವಟಿಕೆಗಳಿಗೆ ಅನುದಾನ ಕಡಿಮೆಯಾಗಲಿದೆ. ಹೀಗಾಗಿ ಹೊಸ ವಿವಿಗಳ ಸ್ಥಾಪನೆ ಬೇಡವೆಂದು ಪ್ರಬಲವಾಗಿ ಪ್ರತಿಪಾದಿಸುವುದಾಗಿ ಸಮಿತಿ ಶಿಫಾರಸು ಮಾಡಿದೆ. ಇದರ ಬದಲಾಗಿ ಹಾಲಿ ವಿವಿಗಳು ಹಾಗೂ ಕಾಲೇಜುಗಳನ್ನು ಇನ್ನಷ್ಟು ಸಶಕ್ತಗೊಳಿಸಬೇಕೆಂದು ಹೇಳಿದೆ.

ಸಮಿತಿಯಲ್ಲಿ ಯಾರಿದ್ದರು?

ಟಿ.ಎಂ. ವಿಜಯಭಾಸ್ಕರ್ ಸಮಿತಿ ಅಧ್ಯಕ್ಷರಾಗಿದ್ದರೆ, ವಿಶ್ರಾಂತ ಕುಲಪತಿಗಳಾದ ಡಾ.ಪಿ.ಎಂ. ಸಾಲಿಮಠ, ಡಾ.ವಿಷ್ಣುವರ್ಧನ, ಡಾ.ಎಂ.ಜೆ. ಪಾಟೀಲ್ ಸದಸ್ಯರಾಗಿದ್ದರೆ, ಡಾ. ಎಸ್.ವಿ. ಸುರೇಶ್ ಸದಸ್ಯ ಸಂಚಾಲಕರಾಗಿದ್ದರು. ಕಳೆದ ಮಾರ್ಚ್ 25ರಂದು ಸಮಿತಿ ರಚಿಸಿ ಎರಡು ತಿಂಗಳಲ್ಲಿ ವರದಿ ಸಲ್ಲಿಸುವಂತೆ ಸೂಚಿಸಲಾಗಿತ್ತು.

ಪ್ರಮುಖ ಶಿಫಾರಸುಗಳು

- ಬೇರೆ ರಾಜ್ಯಗಳಂತೆಯೇ ಪಶು ವೈದ್ಯಕೀಯ/ಪ್ರಾಣಿ ಆರೋಗ್ಯ ವಿಜ್ಞಾನ ಶಿಕ್ಷಣಕ್ಕಾಗಿ ಪ್ರತ್ಯೇಕ ವಿಶ್ವವಿದ್ಯಾಲಯ ಅಗತ್ಯವಾಗಿದೆ.
- 6 ರಾಜ್ಯಗಳಲ್ಲಿ ತೋಟಗಾರಿಕೆ ಬೆಳೆಗಳಿಗಾಗಿ ಪ್ರತ್ಯೇಕ ವಿಶ್ವವಿದ್ಯಾಲಯಗಳಿಲ್ಲ. ರಾಜ್ಯದಲ್ಲಿ ಮಾತ್ರ ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯಗಳು ಪ್ರತ್ಯೇಕವಾಗಿವೆ.
- ಸಾಮಾನ್ಯ ಎಂಎಸ್‌ಸಿ (ಕೃಷಿ) ಬದಲು, ಆಯಾ ವಿಭಾಗದ ವಿಶೇಷತೆಯಾಗಿ ಸ್ನಾತಕೋತ್ತರ ಪದವಿ ಪ್ರದಾನ ಮಾಡಲಿ
- ಅರಣ್ಯ ಕಾಲೇಜು ವಿದ್ಯಾರ್ಥಿಗಳಿಗೆ 21 ದಿನಗಳಿಗೆ ಹಾಗೂ ಕೃಷಿ ವಿವಿಯವರಿಗೆ 3 ತಿಂಗಳ ಸ್ಟೈಪೆಂಡ್ ನೀಡಲಾಗುತ್ತಿದ್ದು, ಈ ತಾರತಮ್ಯ ನಿವಾರಣೆಯಾಗಲಿ
- ಸಂಶೋಧನೆ ಕ್ಷೇತ್ರಕ್ಕೆ ನಿರ್ದೇಶಕರ ಹುದ್ದೆ ಸೃಜಿಸಿ ಅವರ ಅಧೀನದಲ್ಲಿ ತೋಟಗಾರಿಕೆ ಹಾಗೂ ವಿವಿಧ ವಿಭಾಗಗಳಿಗೆ ಸಹ ಸಂಶೋಧನಾ ನಿರ್ದೇಶಕರನ್ನು ನಿಯೋಜಿಸಬೇಕು.
- ಸಂಶೋಧನಾ ಕೇಂದ್ರಗಳು, ವಿಸ್ತರಣಾ ಘಟಕಗಳು, ಬೋಧಕರು ಹಾಗೂ ಸಿಬ್ಬಂದಿ, ಆಡಳಿತ ವಿಷಯದಲ್ಲೂ ಹಲವು ಶಿಫಾರಸುಗಳನ್ನು ನೀಡಲಾಗಿದೆ.

01-08-2025
Vijaya Vani